**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 06.03.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಸಿ ಎಸ್ ವಕೀಲರಿಂದ**

ನಾನು ಚೀಟಿ ಕಟ್ಟಿರುವ ಬಗ್ಗೆ ಅಥವಾ ಪಿರ್ಯಾದಿ ತಾಯಿ ಚೀಟಿ ನಡೆಸಿದ್ದ ಬಗ್ಗೆ ಯಾವುದೆ ದಾಖಲೆಗಳು ಇರುವುದಿಲ್ಲ. ನಾನು ಕೊನೆಯ ಬಾರಿ ಯಾವಾಗ ಚೀಟಿ ಹಣ ಕಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ಚೀಟಿ **2011** ರಲ್ಲಿ ಪ್ರಾರಂಭವಾಗಿದ್ದು ಯಾವಾಗ ಮುಗಿಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಚೀಟಿ **20** ಕಂತುಗಳ ಚೀಟಿ ಆಗಿರುತ್ತದೆ . **2011-2019** ರವರೆಗೆ ಚೆಕ್ ನ್ನು ವಾಪಸ್ಸು ಪಡೆಯಲು ಪಿರ್ಯಾದಿಗೆ ನೋಟಿಸು ಅಥವಾ ಬ್ಯಾಂಕ್ ಗೆ ನೋಟಿಸು ನೀಡಿರುವುದಿಲ್ಲ. ಪಿರ್ಯಾದಾರಿಗೆ ಸಾಲದ ಹಣ ಕೊಡಲು ಬಾಕಿ ಇದ್ದ ಕಾರಣ ಯಾವುದೆ ದೂರು ಅಥವಾ ನೋಟಿಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ **2018** ರಲ್ಲಿ ಸಾಲವಾಗಿ ಹಣ ಪಡೆದಿದ್ದು ಅದರ ಮರು ಪಾವತಿಗಾಗಿ ನಿಪಿ **1** ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ಈ ಪ್ರುರಕಣದ ಮೊತ್ತವನ್ನು ನೀಡಲು ಬಾದ್ಯಸ್ಥ ಎಂದರೆ ಸರಿಯಲ್ಲ. ಪಿರ್ಯಾದಿಗೆ ನಾನು **2** ಲಕ್ಷ ಹಣ ಕೊಡಲು ತಪ್ಪಿಸಿಕೊಳ್ಳುವ ಸಲುವಾಗಿ ನನ್ನ ಮತ್ತು ಅವರ ನಡುವೆ ಚೀಟಿ ವ್ಯವಹಾರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯ ತಾಯಿ ಯಾವುದೆ ಚೀಟಿ ವ್ಯವಹಾರ ಮಾಡದೆ ಇರುವುದರಿಂದ ಯಾವ ತಿಂಗಳು ಪ್ರಾರಂಭವಾಯಿತು ಹಾಗೂ ಯಾವ ತಿಂಗಳು ಕೊನೆಗೊಂಡಿತು ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯ ತಾಯಿ ಯಾವುದೆ ಚೀಟಿ ವ್ಯವಹಾರ ಮಾಡದೇ ಇರುವುದರಿಂದ ಆ ಬಗ್ಗೆ ಯಾವುದೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು

ಪ್ರಮಾಣ ಪತ್ರವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮರು ಉತ್ತರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ನೀಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ